

**ಅನಿತಾ ಇಲ್ಲದೆ ತಾನು ಒಂಟಿಯಾಗಿರುವ ಮನೆಗೆ ರೇಣುಕಾ ಬರುವುದಿಲ್ಲ ಅಂದುಕೊಂಡಿದ್ದ ರಾಜಗೋಪಾಲ. ಆದರೆ ಅವನ ನಿರೀಕ್ಷೆಗೆ ವಿರುದ್ಧವಾಗಿ ರೇಣುಕಾ ಬಂದಳು!**


ಮಲಯಾಳಂ:

**ಹರಿಕುಮಾರ್**

ಕನ್ನಡಕ್ಕೆ

**ಕೆ.ಕೆ. ಗಂಗಾಧರನ್**




# ಹೆಂಚು ಹಾಕಿದ ಪುಟ್ಟ ಮನೆ

"ಮನೆಯ ಪರಿಸರ ನನಗೆ ತುಂಬಾ ಇಷ್ಟವಾಯಿತು" ರೇಣುಕಾ ಹೇಳಿದಳು. ಅವಳು ಮೂರು ಗಂಟೆಗೇ ಬಂದಿದ್ದಳು. ಈಗ ಗಂಟೆ ನಾಲ್ಕೂವರೆ ಅನಿತಾಳ ಬೆನ್ನು ತಟ್ಟುತ್ತಾ ರೇಣುಕಾ ಮಾತು ಮುಂದುವರಿಸಿದಳು.

"ಪ್ರೀತಿಸುವ ಗಂಡ, ಮುದ್ದಾದ ಎರಡು ಮಕ್ಕಳು– ಒಟ್ಟಿನಲ್ಲಿ ನಿಮ್ಮದು ಸಂತುಷ್ಟ ಕುಟುಂಬ".

ರಾಜಗೋಪಾಲ ಗಟ್ಟಿಯಾಗಿ ನಕ್ಕ.

"ಅನಿತಾ, ರೇಣುಕಾ ಹೇಳುವುದನ್ನು ಕೇಳಿದರೆ ನಾವಿಬ್ಬರು ಚೆನ್ನಾಗಿ ನಟಿಸುತ್ತಿದ್ದೇವೆಂತ ಗೊತ್ತಾಗುತ್ತೆ".

"ನಟನೆ ಯಾವುದು, ನಿಜವಾದ ಪ್ರೀತಿ ಯಾವುದು ನನಗೆ ಚೆನ್ನಾಗಿ ಗೊತ್ತು". ರೇಣುಕಾ ಅಷ್ಟೇ ಸರಳವಾಗಿ ನುಡಿದಳು.

ಕಿಟಕಿಯ ಬಳಿ ಇರಿಸಿದ್ದ ಮೀನುಗಳಿರುವ ಗಾಜಿನ ಟ್ಯಾಂಕನ್ನು ನೋಡುತ್ತಾ ಅವಳು ಹೇಳಿದಳು.

"ನನಗೆ ಈ ಪುಟ್ಟ ಮೀನುಗಳೆಂದರೆ ತುಂಬಾ ಇಷ್ಟ. ತಿಳಿಯಾದ ನೀರು. ದಪ್ಪನೆಯ ಹಸಿರು ಗಿಡಗಳು. ಈಜಾಡುತ್ತಿರುವ ಸುಂದರವಾದ ಮೀನುಗಳು. ಈ ಮನೆಯಲ್ಲಿ ಮೀನುಗಳು ಕೂಡ ಎಷ್ಟು ಸಂತೋಷದಿಂದಿವೆ".

ಅದರಲ್ಲಿರುವ ಸ್ವಚ್ಛವಾದ ನೀರಿನ ರಹಸ್ಯ ಅದನ್ನು ತಯಾರಿಸುವ ವಿಧಾನ ಮುಂತಾದುವುಗಳನ್ನು ವಿವರಿಸಲು ಮುಂದಾದ ರಾಜಗೋಪಾಲ. ಆದರೆ ರೇಣುಕಾ ಅದರಲ್ಲಿ ಆಸಕ್ತಿ ತೋರಲಿಲ್ಲ. ಯಾವುದೇ ವಿಷಯದ ಕುರಿತು ಪೂರ್ತಿ ತಿಳಿದುಕೊಳ್ಳುವ ವ್ಯವಧಾನ ಅವಳಲ್ಲಿರಲಿಲ್ಲ. ಅವಳಲ್ಲಿರುವುದು ಪ್ರಶ್ನೆಗಳು ಮಾತ್ರ. ಒಂದು ಪ್ರಶ್ನೆಗೆ ಉತ್ತರ ಪಡೆದುಕೊಳ್ಳುತ್ತಿರುವಾಗಲೇ ರೇಣುಕಾ ತಾಳ್ಮೆಗೆಟ್ಟು, ಮತ್ತೊಂದು ಪ್ರಶ್ನೆಗೆ ಜಿಗಿದು ಬಿಡುತ್ತಿದ್ದಳು. ಮೀನುಗಳ ಕುರಿತು ಹೇಳುವಾಗ ರಾಜಗೋಪಾಲ ವಾಚಾಳಿಯಾಗುತ್ತಿದ್ದ. ಅದರ ಪೋಷಣೆ, ಆಹಾರ ವಿಧಾನಗಳ ಕುರಿತು ಮಾತಾಡುವುದೆಂದರೆ ತನ್ನನ್ನು ತಾನೇ ಮರೆತುಬಿಡುತ್ತಿದ್ದ. ಆದರೆ ಕೇಳುಗರಿಗೆ ಅಷ್ಟೊಂದು ತಾಳ್ಮೆ ಇರಬೇಕಲ್ಲ!

"ಸರಿ ನಾನಿನ್ನು ಹೊರಡ್ತೀನಿ. ನೀವು ಯಾವಾಗ ಬರೋದು ನಮ್ಮ ಮನೆಗೆ. ನಾನೇ ಎಷ್ಟು ಸಾರೀಂತ ಬರೋದು?"

"ಒಂದು ದಿವಸ ಬರೋಣ" ರಾಜಗೋಪಾಲ ಹೇಳಿದ. "ನನಗೆ ನಿಮ್ಮ ಮನೆ ದಾರಿ ಗೊತ್ತಿಲ್ಲವಲ್ಲ".

"ಬಹಳ ಸುಲಭ. ಈ ಬೀದಿ ಕೊನೆಯಾಗ್ತದಲ್ಲ ಅಲ್ಲಿಂದ ಎಡಕ್ಕೆ ಹೋದರೆ ಒಂದು ಸಣ್ಣ ದೇವಸ್ಥಾನ ಇದೆ— ಅನಿತಂಗೆ ಗೊತ್ತಲ್ಲ?—"

"ನನಗೆ ಗೊತ್ತು—" ಅನಿತಾ ಹೇಳಿದಳು.

ದೇವಸ್ಥಾನದ ಎದುರುಗಡೆ ಐದನೆಯದು— ಹೆಂಚು ಹಾಕಿದ ಪುಟ್ಟಮನೆ—"

"ಬರ್ತೀವಿ—ಬರ್ತೀವಿ"

ರೇಣುಕಾ ಹೊರಟಳು.

ನೋಡಲಿಕ್ಕೆ ಅವಳು ಚೆನ್ನಾಗಿದ್ದಾಳೆ. ತುಸು ಸ್ಥೂಲ ಶರೀರವಾದರೂ ಸುಂದರವಾದ ಮೈಕಟ್ಟು. ಸೊಂಪಾಗಿ, ದಟ್ಟವಾಗಿ ಬೆಳೆದಿರುವ ತಲೆಗೂದಲು. ಲಕ್ಷಣವಾದ ಮುಖ. ಕಾಂತಿತುಂಬಿದ ಜೋಡಿಕಣ್ಣುಗಳು.

ರೇಣುಕಾ ಗೇಟಿನ ಬಳಿ ಹೋದಾಕ್ಷಣ ತಿರುಗಿ ನೋಡಿ ಕೈಬೀಸುವುದು ಪದ್ಧತಿ. ಆಗ ತಾನು ಅವಳ ಕಣ್ಣಿಗೆ ಬೀಳದಂತೆ ಎಚ್ಚರ ವಹಿಸಬೇಕೆಂದುಕೊಂಡು ರಾಜಗೋಪಾಲ ಬಾಗಿಲ ಮರೆಯಲ್ಲಿ ಸೇರಿಕೊಂಡ.

ಬಹಳ ಬೇಗನೆ ಪರಿಚಯವಾಗಿಬಿಡುವ ಪ್ರಕೃತಿ ಅವಳದು. ಅನಿತಾ ಒಮ್ಮೆ ದೇವಸ್ಥಾನದಲ್ಲಿ ಕಂಡ ಪರಿಚಯ. ಒಂದು ದಿನ ಇದ್ದಕ್ಕಿದ್ದಂತೆ ಗೇಟು ತೆರೆದು ಬಂದೇಬಿಟ್ಟಿದ್ದಳು.




**NEXT PAGE....**

"ಅನಿತಾ ಒಳಗೆ ಬರ್ತಾ ಇರೋದನ್ನ ನೋಡ್ದೆ. ನಿಮ್ಮ ಮನೇನೇ ಇರಬಹುದೂಂತ ಬಂದೆ—" ಎಂದಿದ್ದಳು ಮೊದಲಸಲ ಬಂದಾಗ. ಅದರ ನಂತರ ಅವಳು ಆಗಾಗ ಬರತೊಡಗಿದ್ದಳು. ರಾಜಗೋಪಾಲ ಮನೆಯಲ್ಲಿದ್ದರೆ ಹೆಚ್ಚು ಹೊತ್ತು ನಿಲ್ಲದೆ ಬೇಗನೆ ಹೊರಟು ಬಿಡುತ್ತಿದ್ದಳು. ಅನಿತಾ ಒಬ್ಬಳೇ ಸಿಕ್ಕಿದರೆ ಸ್ವಲ್ಪ ಹೊತ್ತು ಹರಟೆ ಹೊಡೆಯುತ್ತಿದ್ದಳು.

"ಒಂದು ದಿನ ಹೋಗಬೇಕು ಕಣೆ" ರಾಜಗೋಪಾಲ ಅನಿತಾಳಿಗೆ ಹೇಳಿದ.

"ಹೂಂ ಕಣ್ರೀ— ಈ ಶನಿವಾರಾನೇ ಹೋಗೋಣ"

"ಅವರ ಯಜಮಾನ್ರಿಗೇನಂತೆ ಕೆಲಸ?"

"ಪೋರ್ಟ್ ಕೊಚ್ಚಿಯಲ್ಲಿ ಯಾವುದೋ ಜಾಹಿರಾತು ಕಂಪನೀಲಂತೆ—"

"ಆರ್ಟಿಸ್ಟಾ—"

"ಅದೇನೋ ಹೇಳಿದಳು. ಗೊತ್ತಾಗಲಿಲ್ಲ"

ಅನಿತಾ ಆಗಾಗ ತವರು ಮನೆಗೆ ಹೋಗುತ್ತಿರುತ್ತಾಳೆ ಆ ಊರು ಕೂಡ ಸ್ವಲ್ಪ ದೂರದಲ್ಲೇ ಇದೆ. ಅವಳಿಗೆ ಒಂದು ವಾರ ಗಂಡನ ಮನೆಯಾದರೆ ಮತ್ತೊಂದು ವಾರ ಪೂರ್ತಾ ತವರುಮನೆ. ತಾಯಿಗೆ ಒಬ್ಬಳೇ ಮಗಳು. ಒಂದು ವಾರ ಹೋಗದಿದ್ದರೆ ಪತ್ರ ಬರೆದು ಕರೆಸಿಕೊಂಡುಬಿಡುತ್ತಿದ್ದರು. ಮಕ್ಕಳನ್ನು ಕರೆದುಕೊಂಡು ಅನಿತಾ ತವರಿಗೆ ಹೋದರೆ ರಾಜಗೋಪಾಲ ಒಂಟಿ. ಹೆಂಡತಿ ಹೊರಟಾಗ ಅವನಿಗೆ ಮೊದಮೊದಲು ಸಂತೋಷವೇ ಆಗುತ್ತಿತ್ತು. ಆದರೆ ರೈಲು ಹತ್ತಿಸಿ, ನಿಲ್ದಾಣ ಬಿಟ್ಟು ಹೊರಬಂದಾಗ ಒಂಟಿತನದ ನೆನಪಾಗುತ್ತದೆ. ಮನಸ್ಸು ಅಸ್ವಸ್ಥವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ರಾಜಗೋಪಾಲ ಮನೆಯ ದಾರಿ ಬಿಟ್ಟು ನಗರದ ಮುಖ್ಯ ಬೀದಿಗಳಲ್ಲಿ ಅಲೆಯುತ್ತಾನೆ. ಬಹುಶಃ ಅನಿತಾಳಿಗೂ ಅದು ಅರ್ಥವಾಗಿರಬೇಕು. ಅದಕ್ಕೆ ಅವಳು ಶನಿವಾರ, ಭಾನುವಾರಗಳಲ್ಲಿ ತನ್ನ ತವರಿಗೆ ಹೋಗದೆ ಸೋಮವಾರ ಬೆಳಿಗ್ಗೆ ಹೊರಡುತ್ತಿದ್ದಳು. ರಾಜಗೋಪಾಲನಿಗೆ ಆ ಎರಡೂ ದಿನಗಳು ರಜಾದಿನಗಳೇ.

ಆದರೆ ಈ ಸಲ ಅನಿತಾ ಮಕ್ಕಳೊಂದಿಗೆ ಶನಿವಾರವೇ ಹೊರಟುನಿಂತಿದ್ದಳು. ಅವರನ್ನು ಮುಂಜಾನೆಯ ರೈಲು ಹತ್ತಿಸಿ ರಾಜಗೋಪಾಲ ಮನೆಯತ್ತ ಹೊರಟ. ಸಿಟಿ ಬಸ್ಸು ಕಾಯುವುದಕ್ಕಿಂತಲೂ ಕಾಲ್ನಡಿಗೆಯೇ ವಾಸಿಯೆಂದು ಕಾಲೆಳೆಯುತ್ತಾ ಮನೆ ತಲುಪಿದಾಗ ನಸುಕು ಹರಿದಿತ್ತು, ಸ್ನಾನ ಮುಗಿಸಿದ ಮೇಲೆ ಮತ್ತೊಮ್ಮೆ ಸಿಟಿಕಡೆ ಸುತ್ತಾಡಿ, ಒಳ್ಳೆ ಸಿನಿಮಾ ಇದ್ದರೆ ನೋಡಬೇಕೆಂದುಕೊಂಡ.

ಒಂಬತ್ತು ಗಂಟೆಗೆ ಸರಿಯಾಗಿ ಸ್ನಾನ ಮುಗಿಸಿ, ಅಂಗಿಯ ಗುಂಡಿ ಹಾಕುತ್ತಾ ಹೊರಟುನಿಂತಾಗ ಕರೆಗಂಟೆ ಶಬ್ದ ಮಾಡಿತು. ಬಾಗಿಲು ತೆರೆದರೆ— ರೇಣುಕಾ!

ಸಣ್ಣಪುಟ್ಟ ಹೂಗಳಿರುವ ಕಡು ಹಸಿರು ಸೀರೆಗೆ ಒಪ್ಪುವ ರವಿಕೆ. ಬೆಳ್ಳನೆಯ ಕುತ್ತಿಗೆಯಲ್ಲಿ ಕರಿಮಣಿಸರ.

ಅವಳು ಒಳಬರುವಂತೆಯೇ ರಾಜಗೋಪಾಲ ಹೇಳಿದ. "ಅನಿತಾ ಇಲ್ಲ— ಊರಿಗೆ ಹೋಗಿದ್ದಾಳೆ".

ಕೂರಲು ಹೋದ ರೇಣುಕಾ ತಟ್ಟನೆ ನಿಂತಳು.

"ಹಾಗಾದರೆ ನಾನು ಹೋಗ್ತೀನಿ"

"ಕೂತ್ಕೊಳ್ಳಿ ಪರವಾಗಿಲ್ಲ"

"ಬೇಡ ನಿಮಗೇನಾದರೂ ಕೆಲಸ ಇರಬಹುದು— ನಾನು ಬಂದಿದ್ದರಿಂದ ತೊಂದರೆ ಆಯಿತೇನೋ—"

"ಏನು ತೊಂದರೆ— ಸುಮ್ನೆ ಕೂತು ಬೇಜಾರಾಗಿತ್ತು—ಹಾಗೆ ಸುತ್ತಾಡಿಕೊಂಡು ಬರೋಣಾಂತಿದ್ದೆ, ಅನಿತಾ ಇಲ್ಲಾಂತ ನಿಮಗೆ ಮುಜುಗರವಾಗುವುದಾದರೆ ಹೋಗಿ—"

"ಅಂಥಾದ್ದೇನೂ ಇಲ್ಲಪ್ಪ—ನೀವೇನು ನನ್ನನ್ನು ಹಿಡಿದು ತಿಂದುಬಿಡಲ್ವಲ್ಲ, ನಗುತ್ತಲೇ ನುಡಿದ ರೇಣುಕಾ ಸೋಫಾದಲ್ಲಿ ಕುಳಿತುಕೊಂಡಳು.

"ಅನಿತಾ ಯಾವಾಗ ಬರೋದು?"

"ಒಂದು ವಾರ ಆಗಬಹುದೇನೋ—ಅವಳು ಹೋದ್ರೆ ಹಾಗೇನೇ"

ಹಾಗಾದರೆ ನೀವು ಒಂದು ವಾರ ಒಂಟಿಯಾಗಿರಬೇಕು. ಬೇಜಾರಾಗಲ್ವಾ?"

"ಮೊದಲೆಲ್ಲಾ ಬೇಜಾರಾಗುತ್ತಿತ್ತು, ಈಗ ಅದೂ ರೂಢಿಯಾಗಿಬಿಟ್ಟಿದೆ"

"ನಿಜ ನಿಜ— ಗೋಪುವಿನ ತಂದೆ ಎರಡು ದಿವಸ ಎಲ್ಲಾದರೂ ಹೋದರೂ ಅಷ್ಟೆ"

ರಾಜಗೋಪಾಲ ಮಾತನಾಡಲು ವಿಷಯಕ್ಕಾಗಿ ತಡಕುತ್ತಿದ್ದ, ಏನಾದರೂ ಮಾತನಾಡಿ ಅವಳನ್ನು ಸ್ವಲ್ಪಹೊತ್ತು ಕೂರಿಸಬೇಕೆಂದುಕೊಂಡ.

"ನಿಮ್ಮ ಹುಡುಗ ಯಾವ ಕ್ಲಾಸಿನಲ್ಲಿ ಓದುತ್ತಿದ್ದಾನೆ ಅಂದ್ರಿ?"

"ನೈನ್ತ್"

ನೈನ್ತಾ? ರಾಜಗೋಪಾಲ ಆಶ್ಚರ್ಯದಿಂದ ಎಂಬಂತೆ ಹೇಳಿದ.

"ಒಂಬತ್ತರಲ್ಲಿ ಓದುವ ಮಗ ಇದ್ದಾನೇಂತ ನಿಮ್ಮನ್ನು ನೋಡಿದ್ರೆ ಹೇಳಕ್ಕಾಗಲ್ಲ"

ರೇಣುಕಾ ನವಿರಾಗಿ ನಕ್ಕಳು.

"ನಮ್ಮ ಮದುವೆಯಾಗಿ ಹದಿನೈದು ವರ್ಷವಾಯಿತು. ನನಗೀಗ ಮೂವತ್ತಮೂರು ವರ್ಷ"

"ಅಷ್ಟೊಂತು ಕಾಣಿಸೋದೇ ಇಲ್ಲ"

ಮತ್ತೆ ಮೌನ. ರೇಣುಕಾ ಗಾಜಿನ ಟ್ಯಾಂಕಿನಲ್ಲಿ ಸ್ವಚ್ಛಂದವಾಗಿ ಈಜಾಡುತ್ತಿರುವ ಮೀನುಗಳನ್ನೇ ನೋಡುತ್ತಾ ಕುಳಿತಳು. ಆತ ಆಕೆಯನ್ನೇ ಸ್ವಲ್ಪಹೊತ್ತು ದಿಟ್ಟಿಸಿದ. ತಕ್ಷಣ ಏನೋ ತಪ್ಪಾದಂತೆ ಎದ್ದು ನಿಂತು, "ರೇಣುಕಾ ನಿಮಗೆ ಒಂದು ಕಪ್ಪು ಚಹಾ ಮಾಡುತ್ತೇನೆ" ಎಂದ. ರೇಣುಕ ಬೆಚ್ಚಿದವಳಂತೆ, "ಅಯ್ಯೋ ಬೇಡಾರಿ—ನಾನು ಹೊರಟೆ"

ಇರಿ—ಹೇಗೂ ನಾನು ಕುಡಿದಿಲ್ಲ—ಜೊತೆಗೆ ಇನ್ನೊಂದು ಕಪ್ ಹೆಚ್ಚಿಗೆ ಮಾಡಿದ್ರಾಯಿತು"

"ಹಾಗಿದ್ದರೆ ನೀವು ಕೂತ್ಕೊಳ್ಳಿ—ನಾನೇ ತಯಾರಿಸ್ತೀನಿ" ಎನ್ನುತ್ತಾ ರೇಣುಕ ಸೀರೆಯ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ ಅಡಿಗೆ ಮನೆಯತ್ತ ನಡೆದಳು.

"ಬೇಡ ರೇಣುಕಾ— ನನಗೆ ಚಹ ಮಾಡ್ಲಿಕ್ಕೆ ಬರುತ್ತೆ ನೀವು ಹೋಗಿ ಕೂತ್ಕೋಳಿಪ್ಪ—ನೀವು ನನ್ನ ಗೆಸ್ಟು" ಎನ್ನುತ್ತಾ ರಾಜಗೋಪಾಲನೂ ಅಡಿಗೆ ಮನೆಯತ್ತ ನಡೆದ.

"ಓ ಗೆಸ್ಟು" ಅವಳು ಕಿಲಕಿಲನೆ ನಕ್ಕಳು.

ಕ್ಷಣ ಮಾತ್ರದಲ್ಲಿ ಸ್ಟೌವಿನ ಮೇಲೆ ನೀರಿಟ್ಟಳು. ಆತ ಸಕ್ಕರೆ ಮತ್ತು ಚಹ ಪುಡಿಯನ್ನು ಎತ್ತಿಕೊಟ್ಟ. ಫ್ರಿಡ್ಜ್‌ನಿಂದ ಹಾಲೂ ತೆಗೆದಿರಿಸಿದ.

"ಎಲ್ಲಾ ಅನುಕೂಲಗಳಿರುವ ಅಡಿಗೆ ಮನೆ. ಅನಿತ ನಿಜವಾಗಲೂ ಅದೃಷ್ಟಶಾಲಿ" ರೇಣುಕಾ ಅಭಿಪ್ರಾಯಪಟ್ಟಳು.

"ಏನೇ ಆದರೂ ಇದು ನಿಮ್ಮ ಸ್ವಂತ ಮನೆ ಅಲ್ಲವಲ್ಲ"

"ಒಳ್ಳೆಯ ಬಾಡಿಗೆ ಮನೆ ಸಿಗಬೇಕಾದರೂ ಅದೃಷ್ಟ ಬೇಕು. ಹಾಗೆ ನೋಡಿದರೆ ನಮ್ಮದೇನು ಸ್ವಂತ ಮನೇನಾ?

"ನಿಮಗೇನು ಅಂತಹ ದುರಾದೃಷ್ಟ, ರೇಣುಕಾ. ಪ್ರೀತಿಸುವ ಗಂಡ. ಜಾಣ ಮಗ—ಇದಕ್ಕಿಂತಲೂ ಇನ್ನೇನು ಬೇಕು?"

ರೇಣುಕಾ ಸುಮ್ಮನೆ ನಕ್ಕಳು. ಚಹದ ಪುಡಿಯ ಡಬ್ಬಿಯ ಮುಚ್ಚಳ ತೆರೆದು ಸ್ಪೂನನ್ನು ಕೈಯಲ್ಲಿಡಿದು ನೀರು ಕುದಿಯುವುದನ್ನೇ ಕಾಯುತ್ತಿದ್ದಳು. ಚಹ ಸಿದ್ಧವಾದಾಗ ತಿಳಿಯಿತು ಅವಳು ತಯಾರಿಸಿದ್ದು ಒಂದೇ ಕಪ್ಪೆಂದು. ಚಹವನ್ನು ಆತನಿಗೆ ಕೊಟ್ಟು, ಅವಳು ನುಡಿದಳು

"ಸರಿ ನಾನಿನ್ನು ಹೊರಟೆ—"

"ನೀವು ಕುಡೀಲೇ ಇಲ್ಲ"

"ಇಲ್ಲ—ನಾನು ಹಾಗೆ ಟೀ ಕುಡಿಯೋದಿಲ್ಲ" ಎನ್ನುತ್ತಾ ಬಾಗಿಲು ತೆರೆದಳು.

ತುಂಬಾ ಥ್ಯಾಂಕ್ಸ್, ರೇಣುಕಾ"

ಅವಳು ಹೊರಟು ಹೋದಮೇಲೆ ಆತನಿಗೇನೋ ತಪ್ಪು ಮಾಡಿದೆನೆಂದೆನಿಸಿತು. ಅವಳು ಹೋಗುವ ಮೊದಲೇ ಕುಡಿದು ಚೆನ್ನಾಗಿದೇಂತ ಹೇಳಬೇಕಿತ್ತು,

ರಾತ್ರಿ ಮಲಗಿದಾಗ ಆತ ಮತ್ತೆ ರೇಣುಕಾಳನ್ನು ಜ್ಞಾಪಿಸಿಕೊಂಡ. ತಾನು ಒಬ್ಬನೇ ಇದ್ದಾಗ ಅವಳು ಎಷ್ಟು ಸಲಿಗೆಯಿಂದ ನಡೆದುಕೊಂಡಳು. ಅಂತಹ ಹೆಂಗಸರೆಂದರೆ ರಾಜಗೋಪಾಲನಿಗೆ ತುಂಬ ಅಂಜಿಕೆಯೂ ಇದೆ. ಅದಕ್ಕೆ ಪೂರಕವಾಗಿ ಅವನಿಗೆ ಹಳೆಯ ಘಟನೆಯೊಂದು ಜ್ಞಾಪಕಕ್ಕೆ ಬಂತು.

ಮದುವೆಯ ಮೊದಲು ಅವನು ಒಂದು ಮನೆಯಲ್ಲಿ 'ಪೇಯಿಂಗ್ ಗೆಸ್ಟಾಗಿದ್ದ; ಅವನಿಗೆ ಒಂದು ಪ್ರತ್ಯೇಕ ಕೊಠಡಿಯೂ ಇತ್ತು, ಆ ಮನೆಯ ಹೆಂಗಸು ಆಗಾಗ ಅವನ ಕೊಠಡಿಗೆ ಬರುತ್ತಿದ್ದಳು. ಆತನೊಂದಿಗೆ ಸಲಿಗೆಯಿಂದ ಮಾತನಾಡುತ್ತಿದ್ದಳು. ಅವನು ಕೇಳದೆಯೇ ಚಹ, ತಿಂಡಿ ಕೊಡುತ್ತಿದ್ದಳು.ಅದನ್ನೇ ಅವನು ಅಪಾರ್ಥ ಮಾಡಿಕೊಂಡು ಅವಳು ತನ್ನನ್ನು ಪ್ರೀತಿಸುತ್ತಿದ್ದಾಳೆಂದು ತಿಳಿದುಬಿಟ್ಟಿದ್ದ, ಒಮ್ಮೆ ಏನೋ ಮಾತನಾಡುತ್ತಿದ್ದಾಗ ಸರಕ್ಕೆಂದು ಅವಳ ಕೈಹಿಡಿದು ಬಿಟ್ಟಿದ್ದ, ಅವಳು ನಿಧಾನವಾಗಿ ಕೈಯನ್ನು ಬಿಡಿಸಿ ನುಡಿದಿದ್ದಳು. ನಿಮ್ಮನ್ನು ನಾನು ನನ್ನ ಅಣ್ಣಾಂತ ತಿಳಿದುಕೊಂಡಿದ್ದೆ, ಆದರೆ ನೀವು—". ಅದರ



NEXT PAGE......

ಮರುದಿನವೇ ರಾಜಗೋಪಾಲ ರೂಮು ಖಾಲಿಮಾಡಿದ್ದ.

ಆದರೆ ಕನಸು ಕಾಣಲು, ಕಥೆಗಳನ್ನು ಹೆಣೆಯಲು ತನಗೆ ಸ್ವಾತಂತ್ರ್ಯವಿದೆಯಲ್ಲ! ಅದನ್ನು ರಾಜಗೋಪಾಲ ಸಣ್ಣವನಿರುವಾಗಲೇ ರೂಢಿಸಿಕೊಂಡಿದ್ದ. ಹಾಸಿಗೆಯಲ್ಲಿ ಒಂಟಿಯಾಗಿ ಮಲಗಿದಾಗ ಕನಸುಗಳನ್ನು ಕಾಣುವುದರಲ್ಲಿ ಸುಖ ಕಾಣುತ್ತಿದ್ದ. ನಾಲ್ಕನೆಯ ತರಗತಿಯಲ್ಲಿ ಓದುವಾಗ ಮೇಷ್ಟ್ರ ಮಗಳು ಮಾಲತಿ ತನ್ನ ಸಹಪಾಠಿಯಾಗಿದ್ದಳು. ಅವಳಿಗೆ ಬಣ್ಣದ ಸೀಮೆಸುಣ್ಣ ಸಿಗುತ್ತಿತ್ತು. ಒಂದು ದಿನ ಅವಳು ಕ್ಲಾಸಿನಲ್ಲಿ ಎಲ್ಲರಿಗೂ ಬಣ್ಣದ ಸೀಮೆ ಸುಣ್ಣಗಳನ್ನು ಹಂಚಿದ್ದಳು. ಆದರೆ ತನಗೆ ಮಾತ್ರ ಕೊಡಲಿಲ್ಲ. ತನಗೆ ಕೊಡದಿರಲು ಅವಳಲ್ಲಿ ಅಂಥ ಬಲವಾದ ಕಾರಣವೇನೂ ಇರಲಿಲ್ಲ. ಅವಳು ಎಲ್ಲರ ಮುಂದೆಯೇ "ರಾಜಗೋಪಾಲನಿಗೆ ಮಾತ್ರ ಕೊಡಲ್ಲ" ಅಂದಿದ್ದು ಅವನಿಗೆ ತುಂಬಾ ಅವಮಾನವಾದಂತಾಗಿತ್ತು. ಮರುದಿನ ಬೆಳಗ್ಗೆ ಎಚ್ಚರವಾದಾಗ ಆತನಿಗೆ ಹಿಂದಿನ ದಿನದ ಘಟನೆ ನೆನಪಾಯಿತು. ಅವನು ಒಂದು ದೊಡ್ಡ ಕಾಡಿನ ನಡುವೆ ಹೋಗುತ್ತಿರುವಂತೆ. ಕಾಡಿನ ಮಧ್ಯೆ ಹಳೆಯ ಕಟ್ಟಡ ಕಂಡಂತೆ ಕಲ್ಪಿಸಿಕೊಂಡ. ಜನರಹಿತನಾದ ಆ ಭವನದೊಳಗೆ ಹಲವಾರು ಪೆಟ್ಟಿಗೆ ತುಂಬಾ ಸೀಮೆಸುಣ್ಣ ತುಂಬಿದ್ದಾರೆ. ತನಗೆ ಬೇಕಾದಷ್ಟನ್ನು ತೆಗೆಯಲು ಯಾರ ಆಕ್ಷೇಪಣೆಯೂ ಇರಲಿಲ್ಲ. ಆತ ಒಂದು ಪೆಟ್ಟಿಗೆಯನ್ನು ಹೊತ್ತು ಹೊರನಡೆದ. ಕ್ಲಾಸಿಗೆ ತೆರಳಿ ಎಲ್ಲರಿಗೂ ಅದನ್ನು ಹಂಚಿದ. ಆದರೆ ಮಾಲತಿಗೆ ಮಾತ್ರ ಕೊಡಲಿಲ್ಲ. ಮಾಲತಿಯ ವಿಷಣ್ಣವದನವನ್ನು ಕಂಡು ತೃಪ್ತಿ ಪಟ್ಟ—

ಬಾಲ್ಯ ಕಳೆದು ಯೌವ್ವನಕ್ಕೆ ಬಂದಾಗ ಸುಂದರಿ ತರುಣಿಯರೊಂದಿಗೆ

ಪ್ರೇಮಸಲ್ಲಾಪ ನಡೆಸುವಂತೆ ಕನಸುಕಾಣುತ್ತಿದ್ದ. ಅವರಲ್ಲಿ ಹೆಚ್ಚಿನವರು ತನ್ನ ಸಹಪಾಠಿಗಳು. ಕೆಲವರು ಯಾವುದಾದರೂ ಸಮಾರಂಭಗಳಲ್ಲಿ ಕಂಡ ಹೆಣ್ಣುಮಕ್ಕಳು.

ಮತ್ತೂ ದೊಡ್ಡವನಾದಾಗ, ದೊಡ್ಡ ತರುಣಿಯರ ಕುರಿತು ಕನಸುಗಳನ್ನು ಹೆಣೆಯುತ್ತಿದ್ದ. ಕೆಲವರೊಂದಿಗೆ ಮಾತನಾಡಿದಂತೆ. ಕೆಲವರನ್ನು ಕೋಣೆಗೆ ಆಹ್ವಾನಿಸಿದಂತೆ— ಹೀಗೆ ಕೊನೆಗೆ ಎಲ್ಲರೂ ತನ್ನ ಭಾವನಾರತಿಯಲ್ಲಿ ಶರಣಾಗಿ ಬಿಡುತ್ತಿದ್ದರು.

ಮದುವೆಯ ನಂತರ ರಾಜಗೋಪಾಲನ ಕನಸುಗಳಿಗೆಲ್ಲಾ ಕೊನೆಯಾದಂತಾಯಿತು. ಆದರೆ ಹೆಂಡತಿ ಊರಿಗೆ ಹೋದಾಗ ಎದುರಿಸಬೇಕಾದ ಒಂಟಿ ದಿನಗಳನ್ನು ಮತ್ತೆ ಕನಸು ಕಾಣುವುದರಲ್ಲಿ ಕಳೆಯುತ್ತಿದ್ದ. ಅನಿತಳಿಗೂ ಕೂಡ ಈ ಗುಟ್ಟು ಗೊತ್ತಿಲ್ಲ. ಅದನ್ನು ತನ್ನ ವೈಯಕ್ತಿಕ ವಿಷಯವಾಗಿಯೇ ಕಾಪಾಡಿಕೊಂಡು ಬಂದಿದ್ದ. ರಾಜಗೋಪಾಲ ಮನೆಗೆ ಬಂದ ಹೆಂಗಸರೊಂದಿಗೂ ಗಂಭೀರವಾಗಿಯೇ ನಡೆದುಕೊಳ್ಳುವವನು. ಆದರೆ ಅವರು ಮನೆಯಿಂದ ಹೋದಾಕ್ಷಣ ಅವರನ್ನು ಮನಸ್ಸಿನೊಳಗೇ ಬೆತ್ತಲೆ ಮಾಡಿ ಖುಷಿಪಡುತ್ತಿದ್ದ.

ಶನಿವಾರ ಬೆಳಗ್ಗೆ ಎದ್ದಾಗ ಗಂಟೆ ಒಂಬತ್ತು. ರಾತ್ರಿ ತುಂಬಾ ಹೊತ್ತು ರೇಣುಕಾಳನ್ನು ಧ್ಯಾನಿಸಿಕೊಂಡೇ ಮಲಗಿದ್ದುದರಿಂದ ನಿದ್ರೆ ಹತ್ತಲು ತಡವಾಗಿತ್ತು. ಸ್ನಾನ ಮುಗಿಸಿ ಚಹ ಕುಡಿದಾಗ ಹತ್ತೂವರೆದಾಟಿತ್ತು. ರಾಜಗೋಪಾಲ ಮನೆಗೆ ಬೀಗ ಜಡಿದು ರಸ್ತೆಗಿಳಿದ. ಎಲ್ಲಿಗೆ? ನಡೆಯಲು ತೊಡಗಿದಾಗ ಕಾಲುಗಳು ಸಾಗಿದ್ದು ದೇವಸ್ಥಾನದ ಕಡೆಗೆ.

ದೇವಸ್ಥಾನ ಚಿಕ್ಕದು. 'ಸಿಟ್ಟು ಮುಂದು' ತೊಟ್ಟಿ. ಒಂದೆರಡು ಹೆಂಗಸರು ಪ್ರದಕ್ಷಿಣೆ ಹಾಕುತ್ತಿದ್ದರು. ಪ್ರವೇಶದ್ವಾರದಲ್ಲಿ "ಓಂ ನಮಃಶಿವಾಯ" ಎಂದು ಬರೆದಿತ್ತು.

ದೇವಸ್ಥಾನದಿಂದ ಹೊರಬಂದ ಆತ ಎದುರುಗಡೆ ಇರುವ ಮನೆಗಳನ್ನು ಎಣಿಸತೊಡಗಿದ. ಐದನೆಯದು- ಹೆಂಚು ಹಾಕಿದ ಪುಟ್ಟ ಮನೆ. ಉಳಿದವುಗಳೆಲ್ಲಾ ಕಾಂಕ್ರೀಟಿನ ಮಹಡಿ ಮನೆಗಳು. ಅವುಗಳ ನಡುವೆ ಹೆಂಚಿನ ಮನೆ ವಿರೋಧಾಭಾಸದಂತೆ ತೋರುತ್ತಿತ್ತು. ಮರದ ಪಟ್ಟಿ ಹೊಡೆದ ಗೇಟಿರುವ ಆ ಮನೆಯ ಮುಂದೆ ಆತ ಅನುಮಾನದಿಂದ ನಿಂತ. ಮದುವೆಯಾದ ಹೆಂಗಸಿನ ಮನೆಗೆ ಗಂಡ ಇಲ್ಲದಿರುವ ವೇಳೆಯಲ್ಲಿ ಹೋಗುವುದು ಸರಿಯೇ? ರಾಜಗೋಪಾಲನ ಮನಸ್ಸಿನೊಳಗೆ ಸಣ್ಣದೊಂದು ಚರ್ಚೆಯೇ ನಡೆಯತೊಡಗಿತು. ಆಕಸ್ಮಾತ್ ಆಕೆಯ ಗಂಡ ಇದ್ದರೆ—ಗೇಟು ತೆಗೆಯಲು ಹೋದ ಕೈಗಳನ್ನು ಹಿಂದಕ್ಕೆಳೆದುಕೊಂಡ. ತಟ್ಟನೆ ಕಿಟಕಿಯಲ್ಲಿ ರೇಣುಕಾಳ ಮುಖ ಕಾಣಿಸಿತು. ಅವಳು ಅಲ್ಲಿಂದಲೇ" ಏಕೆ ಅಲ್ಲೇ





ನಿಂತಿದ್ದೀರಿ— ಬನ್ನಿ ಒಳಕ್ಕೆ"

ಅವಳು ಬಾಗಿಲು ತೆರೆದು ಆಹ್ವಾನಿಸಿದಳು.

"ನಾನು ಗುಡಿಗೆ ಬಂದಿದ್ದೆ. ನಿಮ್ಮ ಮನೆ ಇಲ್ಲೇ ಇರೋದು ಅಂತ ಹೇಳಿದ್ದು ನೆನಪಾಯಿತು—ಸರಿ ಮನೆ ಗೊತ್ತಾಯಿತಲ್ಲಾ"

"ಅರೆ ಬನ್ನಿ ಕೂತು ಹೋಗುವಿರಂತೆ"

ರಾಜಗೋಪಾಲ ಹಿಂದಿನ ರಾತ್ರಿ ಕಂಡ ಕನಸು ಕೂಡ ಅದೇ. ರೇಣುಕಾ ತನ್ನನ್ನು ಕಾಣುತ್ತಾಳೆ. ತಾನೂ ಒಳಗೆ ಹೋಗುತ್ತೇನೆ— ಇತ್ಯಾದಿ. ಆದರೆ ಈಗ ರೇಣುಕಾ ನಿಜವಾಗಲೂ ಕರೆಯುತ್ತಿದ್ದಾಳೆ— ಆತನ ದೇಹವಿಡೀ ಕಂಪಿಸುತ್ತಿದೆ. ಕಾಲುಗಳನ್ನು ಯಾರೋ ಗಟ್ಟಿಯಾಗಿ ಹಿಡಿದಂತಿದೆ.

"ಬೇಡ ರೇಣುಕಾ— ನಾನು ಇನ್ನೊಮ್ಮೆ ಬರುತ್ತೇನೆ. ಅನಿತಾ ಬರಲಿ"

"ಅಯ್ಯೋ ರಾಮ— ಅದಕ್ಕೇನಂತೆ ಮತ್ತೂ ಬರಬಹುದಲ್ಲ. ಈಗ ಹೇಗೂ ಬಂದಿದ್ದೀರಲ್ಲ — ಬನ್ನಿ"

ಆತ ಅವಳನ್ನು ಹಿಂಬಾಲಿಸಿದ.

ರೇಣುಕಾ ನೈಟಿ ಹಾಕಿದ್ದಳು. ಅದರ ಬಣ್ಣ ಮಾಸಿ. ಕೆಳಭಾಗ ಹರಿದು ನೇತಾಡುತ್ತಿತ್ತು. ಮನೆಯನ್ನು ಪ್ರವೇಶಿಸಿದಾಗ ಆತನ ಉತ್ಸಾಹವೆಲ್ಲಾ ಜರ್ರನೆ ಇಳಿದುಹೋಯಿತು. ಎರಡು ಬೆತ್ತದ ಖುರ್ಚಿಗಳು— ಬೆತ್ತದ್ದೇ ಒಂದು ಟೀಪಾಯಿ. ಕಿಟಕಿಯ ಪರದೆಗಳು ಹರಿದು ಕೊಳಕಾಗಿದ್ದವು. ಒಂದು ಬದಿಯಲ್ಲಿ ಜೀರ್ಣವಾಗುತ್ತಿರುವ ಮೇಜು. ಖುರ್ಚಿ. ಎಲ್ಲದರ ಮೇಲೂ ಅಪಾರ ಧೂಳು. ಕಿಟಕಿಯ ಬಳಿ ಒಂದು ಬೆಂಚು. ಅದರ ಮೇಲೆ ಎರಡು ಅಡಿ ಎತ್ತರದ ಗಾಜಿನ ಟ್ಯಾಂಕಿನಲ್ಲಿ ಕೊಳಕು ನೀರು. ಅದರೊಳಗೆ ಈಜಾಡುತ್ತಿರುವ ಚಿನ್ನದ ಬಣ್ಣದ ಮೀನು.

ಆತ ಅದನ್ನೇ ದಿಟ್ಟಿಸುತ್ತಿದ್ದುದನ್ನು ಗಮನಿಸಿದ ರೇಣುಕಾ ನುಡಿದಳು "ಅದು ನನ್ನ ಮಗನ ಸಂಪಾದನೆ. ಅದನ್ನು ಸರಿಯಾಗಿ ನೋಡಿಕೊಳ್ಳಕ್ಕೇ ಬರಲ್ಲ ಅವನಿಗೆ"

ಆ ಮನೆಯ ಪರಿಸ್ಥಿತಿಗೆ ಆ ಮೀನಿನ ಟ್ಯಾಂಕ್ ಬಹಳಷ್ಟು ಹೊಂದಿಕೊಂಡಂತಿತ್ತು.

ಏಕೆ ಹೀಗೆ?

ಆತನಿಗೆ ನಂಬಿಕೆಯಾಗಲಿಲ್ಲ. ತನ್ನ ಮನೆಯಲ್ಲಿ ಕಾಣುವ ರೇಣುಕಾ ಇವಳೇನಾ? ಖಂಡಿತ ಇದು ಅವಳ ಮನೆ ಆಗಲಿಕ್ಕೆ ಸಾಧ್ಯವಿಲ್ಲ. "ಸಣ್ಣ ಮನೆ ನಮ್ಮದು. ಒಂದು ಹಾಲು. ಒಂದು ರೂಮು ಮತ್ತೊಂದು ಪುಟ್ಟ ಅಡಿಗೆ ಮನೆ—ಇಷ್ಟೇ" ರೇಣುಕಾ ಮನೆಯನ್ನು ಪರಿಚಯಿಸಿದಳು.

ಬೆತ್ತದ ಕುರ್ಚಿಯಲ್ಲಿ ಕುಳಿತ ರಾಜಗೋಪಾಲ. ಮಲಗುವ ಕೋಣೆಯತ್ತ ಕಣ್ಣು ಹಾಯಿಸಿದ. ಒಂದು ಮಂಚ ಅದರ ಮೇಲೆ ಹರಿದ ಬೆಡ್‌ಶೀಟ್ ಹಾಸಲಾಗಿತ್ತು. ಆತನಿಗೇನೋ ಸಂಕಟವಾಯಿತು.

"ಚಹ ಮಾಡಲೆ? ತಣ್ಣಗಿರುವುದೇನಾದರೂ ಕೊಡೋಣವೆಂದರೆ ನಮ್ಮಲ್ಲಿ ಫ್ರಿಡ್ಜ್ ಇಲ್ಲ"

"ಅಯ್ಯೋ ಅಂಥಾದ್ದೇನೂ ಬೇಕಾಗಿಲ್ಲ— ಚಹ ಕೊಡಿ ಸಾಕು"

ರಾಜಗೋಪಾಲನಿಗೆ ತಟ್ಟನೆ ಏನೋ ಹೊಳೆಯಿತು. ಒಂದು ವೇಳೆ ಚಹಕ್ಕೆ ಬೇಕಾದ ಸಕ್ಕರೆ. ಪುಡಿ. ಹಾಲು ಇಲ್ಲದಿದ್ದರೆ— ಛೆ ತಾನವಳನ್ನು ಉಭಯ ಸಂಕಟದಲ್ಲಿ ಕೆಡವುವುದು ಸರಿಯಲ್ಲ—

"ಬೇಡ ರೇಣುಕಾ ಈಗ ಚಹಾನೂ ಬೇಡ. ಒಂದು ಲೋಟ ನೀರು ಕೊಡಿ ಸಾಕು. ಆಗಲೇ ಎರಡು ಸಲ ಚಹ ಕುಡಿದಿದ್ದೀನಿ—" ಸುಳ್ಳು ಪುಟಿಯಿತು.

ಅವಳು ಬಲವಂತ ಮಾಡಲಿಲ್ಲ.

ಎಷ್ಟು ವಿಚಿತ್ರ ಧೂಳು ತುಂಬಿದ ಮನೆಯ ಸಾಮಗ್ರಿಗಳು. ಕಸ ಹರಡಿದ ನೆಲ. ಕಿತ್ತು ಹೋಗಿರುವ ಪರದೆಗಳು. ಹರಿದು ಮಾಸಲಾದ ನೈಟಿ—

ರಾಜಗೋಪಾಲನ ಮನಸ್ಸಿನೊಳಗೆ ಹಲವಾರು ಪ್ರಶ್ನೆಗಳು ಎದ್ದವು. ಕೇಳಬೇಕೆಂದುಕೊಂಡ. ಆದರೆ ಮಾತುಗಳು ಗಂಟಲಿನಲ್ಲೇ ನಿಂತುಕೊಂಡುಬಿಟ್ಟವು. ಅವಳ ವೈಯಕ್ತಿಕ ಬದುಕಿನಲ್ಲಿ ಇಣುಕಲು. ಅದರ ಕುರಿತು ಅನ್ವೇಷಿಸಲು ತಾನೂ ಯಾರು?

"ನೀವು ನಾನು ಬರಬಹುದೂಂತ ಅಂದುಕೊಂಡಿರಲಿಲ್ಲವೇನೋ?"ಆಕೆ ಏನೂ ಉತ್ತರಿಸಲಿಲ್ಲ.

"ನಾನು ಬಂದಿದ್ದರಿಂದ ಏನಾದರೂ ತೊಂದರೆ ಆಯಿತೆ?" ರಾಜಗೋಪಾಲ ಮತ್ತೆ ಮೌನ ಮುರಿದ.

ಅದಕ್ಕೂ ಅವಳು ಏನೂ ಮಾತನಾಡಲಿಲ್ಲ. ತಲೆತಗ್ಗಿಸಿ ನಿಂತಿದ್ದಳು. ಇದ್ದಕ್ಕಿದ್ದಂತೆ ಅವಳ ಕಣ್ಣುಗಳಿಂದ ಎರಡು ಹನಿ ಕಣ್ಣೀರು ತೊಟ್ಟಿಕ್ಕಿತು. ಅದು ಧೂಳು ತುಂಬಿದ ಸಿಮೆಂಟು ನೆಲದ ಮೇಲೆ




NEXT PAGE....

ವೃತ್ತಾಕಾರದ ಚಿತ್ರ ಬರೆಯಿತು. ಅವಳ ಭುಜದ ಮೇಲೆ ಕೈಯಿಟ್ಟು ಸಮಾಧಾನಪಡಿಸಬೇಕೆಂದುಕೊಂಡ. ಆದರೆ ಆಕೆಯ ಸಮಸ್ಯೆ ಏನೆಂಬುದನ್ನು ತಿಳಿಯದೆ ಅವಳನ್ನು ಏನೆಂದು ಸಮಾಧಾನಪಡಿಸುವುದು___

ರೇಣುಕಾ. ನಾನಿನ್ನು ಬರಲೆ?" ರಾಜಗೋಪಾಲ ಎದ್ದುನಿಂತು ಕೇಳಿದ. ಆಕೆ ಬೆಚ್ಚಿದವಳಂತೆ ಕಂಡಳು. ಕಣ್ಣನ್ನು ಕೈಗಳಿಂದ ಒರೆಸಿಕೊಳ್ಳುತ್ತಾ

"ನೀವು ಇನ್ನು ನಮ್ಮ ಮನೆಗೆ ಬರೋದಿಲ್ವ?" ಅವಳ ಧ್ವನಿ ನಡುಗುತ್ತಿತ್ತು.

"ಖಂಡಿತಾ ಬರ್ತೀನಿ"

ಆತ ಹೊರನಡೆದ. ಗೇಟು ಹಾಕುವಾಗ ರೇಣುಕಾಳನ್ನು ನೋಡಿ ನಕ್ಕ. ಅವಳೂ ನಕ್ಕಳು.

ಅನಿತಾ ಮಾಮೂಲಿಗಿಂತಲೂ ಮೊದಲೇ ಬಂದಿದ್ದಳು. ಸೋಮವಾರ ಆಫೀಸಿನಿಂದ ರಾಜಗೋಪಾಲ ತಲುಪುವ ಮೊದಲೇ ಅವಳು ಮನೆಯೊಳಗೆ ಪಾತ್ರೆಗಳೊಂದಿಗೆ ಸರಸವಾಡುತ್ತಿದ್ದಳು.

"ಓ "ಬಂದು ಬಿಟ್ಟೆಯಾ___" ರಾಜಗೋಪಾಲ ಕೇಳಿದ.

"ಏಕೆ ಒಂದು ವಾರ ಬಿಟ್ಟು ಬರ್ತೀನಿಂತ ಖುಷಿಯಾಗಿದ್ದೇನೋ ರಾಯರು". ಅದು ಅವರಿಬ್ಬರ ಮಾಮೂಲಿ ತಮಾಷೆ. ಆದರೆ ಈ ಸಲ ಅನಿತಾ ಒಂದು ವಾರ ಕಳೆದು ಬಂದಿದ್ದರೆ ಚೆನ್ನಾಗಿತ್ತೆಂದು ಆತನಿಗೆ ನಿಜವಾಗಿಯೂ ಅನ್ನಿಸಿತ್ತು. ಮತ್ತೊಮ್ಮೆ ರೇಣುಕಾಳ ಮನೆಗೆ ಹೋಗಿ ಅವಳ ಸಮಸ್ಯೆಗಳನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲ. ಅನಿತಳ ಬರುವಿಕೆಯೊಂದಗೆ ತಣ್ಣಗಾಯಿತು.

ಮರುದಿನ ಅನಿತಾ ಗುಡಿಗೆ ಹೋಗಿ ಬಂದೊಡನೆಯೇ ಹೇಳಿದಳು. "ರೀ. ರೇಣುಕಾ ಸಿಕ್ಕಿದ್ದಳು. ಇವತ್ತು ಸಂಜೇನೇ ಅವರ ಮನೆಗೆ ಬರ್ತೀನಿಂತ ಹೇಳಿದ್ದೀನಿ___ ಬೇರೇನೂ ಪ್ರೋಗ್ರಾಂ ಇಲ್ಲತಾನೇ?"

"ಬೇರೇನೂ ಇಲ್ಲ, ಅವರ ಮನೆಗೆ ಹೋಗೋಣ"

ನಾವು ಹೋಗುವುದನ್ನು ಮೊದಲೇ ತಿಳಿದಿದ್ದ ರೇಣುಕ ಮನೆ ಅಚ್ಚುಕಟ್ಟಾಗಿ ಇಟ್ಟಿರಬಹುದೆಂದು ರಾಜಗೋಪಾಲ ನಿರೀಕ್ಷಿಸಿದ್ದ. ಆದರೆ ಅವರ ನಿರೀಕ್ಷೆ ಹುಸಿಯಾಯಿತು. ಮನೆಯ ಸ್ಥಿತಿಯಲ್ಲಿ ಏನೂ ಬದಲಾವಣೆ ಇರಲಿಲ್ಲ. ಮನೆಯ ಒಳಗೆ ಪ್ರವೇಶಿಸುತ್ತಿರುವಂತೆಯೇ ಅನಿತಾ. ಮುಖ ಸಿಂಡರಿಸಿಕೊಂಡಳು. ರೇಣುಕಾ ಅವರನ್ನು ಕಂಡಾಕ್ಷಣ ಸಂಭ್ರಮ ಪಟ್ಟಳು. ಕೂತುಕೊಳ್ಳುತ್ತಿರುವಂತೆಯೇ ಒಳಗಡೆಯಿಂದ ಒಬ್ಬ ವ್ಯಕ್ತಿ ಅವರು ಕೂತಲ್ಲಿಗೆ ಬಂದರು. "ನೋಡಿ. ನಾನು ಹೇಳ್ತಾ ಇರ್ತೀನಲ್ಲ ಅನಿತಾಂತ___ ದೇವಸ್ಥಾನದಲ್ಲಿ ಪರಿಚಯ ಆದವರು___ ಅವರೇ ಇವರು___ ಅವರು. ಇವರ ಯಜಮಾನ್ರು" ರೇಣುಕಾ ಪರಿಚಯಿಸಿದಳು. ರಾಜಗೋಪಾಲ ಎದ್ದು ಕೈಚಾಚಿದ. ಆಗ ಗೊತ್ತಾಯಿತು. ರೇಣುಕಾ ಗಂಡನಿಗೆ ಬಲಗೈ ಇಲ್ಲವೆಂದು. ಮಂಡಿಯ ಮೇಲಿನ ತುಂಡು ಕೈಯನ್ನು ಆತ ಶರೀರದೊಂದಿಗೆ ಸೇರಿಸಿಕೊಂಡಿದ್ದರು. ಮೊದಲ ನೋಟಕ್ಕೆ ಅವರ ಅಂಗವಿಕಲತೆಯನ್ನು ಗುರುತಿಸಲಾಗುವುದಿಲ್ಲ. ಎಡಗೈ ಇದ್ದರೂ ಬಹಳ ಸಣ್ಣಗಿತ್ತು.

ಚಾಚಿದ ಕೈಗಳನ್ನು ಹಿಂದಕ್ಕೆಳೆದು ರಾಜಗೋಪಾಲ ಸುಮ್ಮನೆ ನಿಂತ. ನಂಬಲಿಕ್ಕೂ ಸಾಧ್ಯವಾಗದಂತಹ ಆಘಾತ. ಆದರೆ ರೇಣುಕಾಳ ಗಂಡನ ಮುಖ ನಿರ್ವಿಕಾರವಾಗಿಯೇ ಇತ್ತು.

"ಕೂತ್ಕೊಳ್ಳಿ___ ನನ್ನ ಹೆಸರು ವೇಣು___ ವೇಣುಗೋಪಾಲ್. ತಾವು?"

"ರಾಜಗೋಪಾಲ್___ ತುಂಬಾ ದಿನಗಳಿಂದ ಬರಬೇಕೂಂತಿದ್ವಿ. ಬಿಡುವೇ ಆಗಿರಲಿಲ್ಲ" ವೇಣು ಏನೂ ಪ್ರತಿಕ್ರಿಯಿಸಲಿಲ್ಲ.

"ಎಲ್ಲಿ ಕೆಲಸ ಮಾಡ್ತಾ ಇದ್ದೀರಿ?" ರಾಜಗೋಪಾಲನೇ ಮಾತು ಮುಂದುವರಿಸಿದ. ವೇಣು ಒಂದು ಕಂಪನಿಯ ಹೆಸರು ಹೇಳಿ. "ಕಾಪಿರೈಟರ್ ಆಗಿ ಕೆಲಸ ಮಾಡ್ತಾ ಇದ್ದೀನಿ" ಎಂದ.

ರಾಜಗೋಪಾಲನ ಮುಖದಲ್ಲಿ ಮೂಡಿದ ಅಚ್ಚರಿಯ ಗೆರೆಗಳು ವೇಣು ಕಾಣದವನಂತೆ ನಟಿಸಿದ. ರಾಜಗೋಪಾಲ ಇನ್ನೇನನ್ನೂ ಕೇಳಲಿಲ್ಲ. ಹುಡುಗರು ಹೊರಗೆ ಆಟವಾಡಿಕೊಳ್ಳುತ್ತಿದ್ದರು. ದೂಳು ತುಂಬಿದ ಆ ಕೊಠಡಿಯಲ್ಲಿ ಕುಳಿತು. ರಾಜಗೋಪಾಲ ಹವಾಮಾನದ ಏರುಪೇರುಗಳ ಬಗ್ಗೆ ಮಾತನಾಡಿದ. ಒಂದು ಮಳೆ ಬಿದ್ದರೆ ಬಿಸಿಲ ಧಗೆ ಕೊಂಚ ಕಡಿಮೆ ಆಗಬಹುದೆಂದು ಹೇಳಿದ. ವೇಣು ಕುರ್ಚಿಯಲ್ಲಿ ಕುಳಿತು ತಲೆಯಾಡಿಸುತ್ತಿದ್ದ. ಆತನಿಗೆ ತನ್ನ ಬಗ್ಗೆ ಏನೂ ಆಸಕ್ತಿ ಇಲ್ಲವೆಂಬ ವಿಚಾರ ರಾಜಗೋಪಾಲನಿಗೆ ಕ್ಷಣಮಾತ್ರದಲ್ಲಿ ತಿಳಿದುಹೋಯಿತು.



ಈ ನಡುವೆ ರೇಣುಕಾ ಅನಿತಾಳನ್ನು ಅಡಿಗೆ ಮನೆಗೆ ಕರೆದುಕೊಂಡು ಹೋಗಿದ್ದಳು.

ರೇಣುಕಾ ಚಹ. ಬಿಸ್ಕಿಟ್ಟು ತಂದು ಕೊಟ್ಟಳು. ಅಂಗಳದಲ್ಲಿ ಆಡುತ್ತಿದ್ದ ಮಕ್ಕಳನ್ನು ಅವಳು ಕರೆದಳು.

ಹೊರಗಿನಿಂದ ಹುಡುಗನೊಬ್ಬ. ಬಂದ. ಅವನಿಗೆ ರೇಣುಕಾಳ ಹೋಲಿಕೆ ಇತ್ತು. ಮಾಸಿದ ಹಳೆಯ ಅಂಗಿ ಹಾಗೂ ಉದ್ದ ಕಡಿಮೆ ಇರುವ ಪ್ಯಾಂಟನ್ನು ಧರಿಸಿದ್ದ.

"ನನ್ನ ಮಗ___" ರೇಣುಕಾ ಮಗನನ್ನು ಪರಿಚಯಿಸಿ ಮಗನತ್ತ ತಿರುಗಿ. "ನೋಡೋ. ಈ ಅಂಕಲಿನ ಮನೆಯಲ್ಲಿ ಕೂಡ ಒಂದು ಮೀನಿನ ಟ್ಯಾಂಕಿದೆ. ತುಂಬಾ ಚೆನ್ನಾಗಿದೆ. ಒಂದು ದಿನ ಅಲ್ಲಿಗೆ ಹೋಗಿ ನೋಡು. ಟ್ಯಾಂಕ್ ಹೇಗೆ ಸ್ವಚ್ಛವಾಗಿ ಇಟ್ಟುಕೊಳ್ಳೋದೂಂತ ಅವರು ಹೇಳಿಕೊಡ್ತಾರೆ".

ಅವನು ರಾಜಗೋಪಾಲನನ್ನು ನೋಡಿ ನಕ್ಕು ಒಳಗೋಡಿದ. ಅವನ ಮುಖದಲ್ಲಿಯೂ ನಿರ್ವಿಕಾರತೆ. ಆಗಲೇ ರಾಜಗೋಪಾಲ ಖಚಿತಪಡಿಸಿಕೊಂಡ. ಆತ ತನ್ನ ಮನೆಗೆ ಬರಲಾರನೆಂದು.

ರೇಣುಕಾಳ ಮನೆಯಿಂದ ಹೊರಬಂದಾಗ. ಅನಿತಾಳಿಗೆ ಏನೋ ಬಿಡುಗಡೆಯ ಭಾವನೆ. ಅವಳಿಗೆ ತುಂಬಾ ಆಯಾಸವಾದಂತಿತ್ತು.

ಗುಡಿಯ ಸಮೀಪ ಬಂದಾಗ ಆಕೆ ಕ್ಷಣಕಾಲ ನಿಂತು ದೇವರಿಗೆ ಕೈ ಮುಗಿದಳು.

"ಪಾಪ ರೇಣುಕಾ" ಮತ್ತೆ ನಡೆಯಲು ತೊಡಗಿದಾಗ ಅನಿತಾ ನುಡಿದಳು.

"ಏನೆ? ರೇಣುಕಾಳ ಏಕಂತೆ ಮನೆ ಆ ತರ ಇಟ್ಕೊಂಡಿರೋದು" ರಾಜಗೋಪಾಲ ಕೇಳಿದ.

"ಕುಡಿತ" ಅನಿತಾ ಚುಟುಕಾಗಿ ಉತ್ತರಿಸಿದಳು.

"ಆತ ಕುಡೀತಾರ?"

"ಹೌದಂತೆ. ನಾನು ರೇಣುಕಾಳನ್ನು ಕೇಳಿದೆ. ಮನೆ ಏಕೆ ಹಾಗೆ ಇಟ್ಕೊಂಡಿದ್ದೀಯಾಂತ. ಅದಕ್ಕವಳು. ಅಡಿಗೆ ಮನೆಯ ಹಿಂಬದಿಗೆ ಕರ್ಕೊಂಡು ಹೋದಳು. ಅಲ್ಲಿ ಮೂಲೇಲಿ ಖಾಲಿ ಬಾಟಲಿಗಳನ್ನು ರಾಶಿ ಹಾಕಿದ್ದರು"

ರಾಜಗೋಪಾಲ ಮೌನವಾದ.

ಸ್ವಲ್ಪ ದಿನಗಳಾದ ಮೇಲೆ ರಾಜಗೋಪಾಲ ಮತ್ತೆ ಒಂಟಿಯಾದ. ಈ ಸಲ ಅನಿತಾ ಹೋಗುವುದು ರೇಣುಕಾಳಿಗೆ ಗೊತ್ತಿತ್ತು. ಆದ್ದರಿಂದ ರೇಣುಕಾ ಬರುವುದಿಲ್ಲವೆಂದುಕೊಂಡಿದ್ದ ರಾಜಗೋಪಾಲ.

ಶನಿವಾರ.

ಒಂಟಿತನದ ಎರಡು ಉದ್ದನೆಯ ದಿನಗಳನ್ನು ಕಳೆಯುವುದು ಹೇಗೆಂದು ಚಿಂತಿಸುತ್ತಲೇ ರಾಜಗೋಪಾಲ ಸ್ನಾನ ಮುಗಿಸಿದ. ನಗರದ ಕಡೆ ಹೋಗೋಣವೆಂದುಕೊಂಡು ಬಾಗಿಲು ತೆಗೆದ.

ಗೇಟು ತೆಗೆದು ರೇಣುಕಾ ಮನೆಯತ್ತ ಬರುತ್ತಿದ್ದಾಳೆ! ಅವಳ ಕೈಯಲ್ಲೊಂದು ಪಾತ್ರೆ.

"ಹೊರಗಡೆ ಹೋಗ್ತಿದ್ದೀರಾ?" ಅವಳು ಕೇಳಿದಳು.

"ಒಬ್ಬನೇ ಕೂತು ಬೇಜಾರಾಯ್ತು___ ಹೊರಗಡೆ ಹೋಗಿಬರೋಣಾಂತಿದ್ದೆ. ಪರವಾಗಿಲ್ಲ ಬನ್ನಿ".

"ಇದರಲ್ಲಿ ಮೀನು ಫ್ರೈ ಇದೆ. ನಿಮಗೆ ತುಂಬಾ ಇಷ್ಟಾಂತೆ. ಅಡಿಗೆ ಕೋಣೆಯಲ್ಲಿ ಇಟ್ಟಿರ್ತೀನಿ. ಬೆಕ್ಕುಗಿಕ್ಕು ಬರೋದಿಲ್ಲ ತಾನೆ?"

ರೇಣುಕಾ ರಾಜಗೋಪಾಲನ ಉತ್ತರಕ್ಕೂ ಕಾಯದೆ ನೇರವಾಗಿ ಅಡಿಗೆ ಮನೆಗೆ ಹೋದಳು. ರಾಜಗೋಪಾಲನೂ ಅಡಿಗೆ ಮನೆಗೆ ಹೋದ.

"ಏಕೆ ಇವತ್ತು ಅನ್ನ ಮಾಡೋದಿಲ್ವ?"

"ಇಲ್ಲ, ಹೊಟೇಲಿನಲ್ಲೇ ಮಾಡೋಣಾಂತಿದ್ದೆ"

"ಓ___ ಸ್ವಲ್ಪ ಅನ್ನ ಮಾಡ್ಲಿಕ್ಕೂ ಸೋಂಬೇರಿತನವೆ ಈ ಗಂಡಸರಿಗೆ? ಹೋಗಲಿಬಿಡಿ. ನಾನೇ ಮಾಡ್‌ಕೊಡ್ತೀನಿ"

"ಬೇಡ ರೇಣುಕಾ___ ಸುಮ್ಮನೆ ನಿಮಗೆ ಯಾಕೆ ತೊಂದರೆ?

"ತೊಂದರೆ ಏನೂ ಇಲ್ಲ___ ಅಕ್ಕಿ ಎಲ್ಲಿ ಇಟ್ಟಿದ್ದೀರಿ ಹೇಳಿ".

"ನೀವ್ಯಾಕಪ್ಪ ಇದೆಲ್ಲಾ ಮಾಡ್ತಾ ಇರೋದು___" ರೇಣುಕಾ ನಕ್ಕಳು.

ಆತ ಒಲ್ಲದ ಮನಸ್ಸಿನಿಂದ ಅಕ್ಕಿ ತೆಗೆದುಕೊಟ್ಟ. ಫ್ರಿಡ್ಜ್‌ನಿಂದ ತರಕಾರಿ ತೆಗೆದು ಅವನೇ ಹೆಚ್ಚತೊಡಗಿದ. ರೇಣುಕಾ ಅದಕ್ಕೂ ಬಿಡಲಿಲ್ಲ.

"ನೀವು ಹೋಗಿ ಕೂತ್ಕೊಳ್ಳಿ. ಇವತ್ತು ನನ್ನದೇ ಅಡಿಗೆ" ಎನ್ನುತ್ತಾ ರೇಣುಕ ತನ್ನ ಸ್ವಂತ ಮನೆಯಲ್ಲೇ ಎಂಬಂತೆ ಅಡಿಗೆ ಕೆಲಸ ಶುರು ಹಚ್ಚಿಕೊಂಡಳು. ಅರ್ಧ ಗಂಟೆಯೊಳಗೆ ಅಡಿಗೆ ಸಿದ್ಧವಾಯಿತು.

"ಎಲ್ಲಾ ರೆಡಿ ಮಾಡಿಟ್ಟಿದ್ದೀನಿ. ಬಡಿಸಿಕೊಂಡು ಊಟ ಮಾಡಿ___ ನಾನು ಹೊರಡಲೆ?"



NEXT PAGE....

"ನೀವೂ ಇಲ್ಲೇ ಊಟ ಮಾಡಿ".

"ಆದರೆ ನೀವು ಈಗ ಹೊರಗಡೆ ಹೋಗ್ತಾ ಇದ್ದೀರಲ್ಲ"

"ಇನ್ನು ಹೊರಗಡೆ ಹೋಗಲ್ಲ, ಕೂತ್ಕೊಳ್ಳಿ"

ಆಕೆ ಕುಳಿತಳು. ಆತ ಸೋಫಾದ ಮತ್ತೊಂದು ಕೊನೆಯಲ್ಲಿ ಕುಳಿತುಕೊಂಡು.

"ನಿಮ್ಮ ಜೊತೆ ಸ್ವಲ್ಪ ಮಾತನಾಡಬೇಕಲ್ಲ"

"ಏನು ಹೇಳಿ"

"ನಾನು ಕೇಳೋದು ನಿಮಗೆ ಇಷ್ಟವಾಗದಿದ್ದರೆ ಉತ್ತರಿಸಬೇಕಾಗಿಲ್ಲ— ನೀವು ನಿಮ್ಮ ಮನೇನ ಏಕೆ ಆ ತರ ಇಟ್ಕೊಂಡಿದ್ದೀರಾ?"

ಅವಳ ಮುಖದಲ್ಲಿನ ಲವಲವಿಕೆ ಮಾಯವಾಗಿ ಮೋಡ ಕವಿಯಿತು.

"ಉತ್ತರ ಹೇಳುವುದು ಕಷ್ಟವಾದರೆ ಬೇಡ"

ಅವಳು ಒಂದು ನಿಟ್ಟುಸಿರು ಚೆಲ್ಲಿ,

"ಕಷ್ಟವೇನೂ ಇಲ್ಲ, ಆದರೆ ಕೇಳಿದ ನಂತರ ನಿಮಗೆ ಹಿಂಸೆಯಾಗಬಹುದು. ಆದ್ದರಿಂದ ಹೇಳೋದು ಬೇಡ ಅನ್ನಿಸುತ್ತೆ"

"ಹೇಳಿ ಪರವಾಗಿಲ್ಲ"

"ಅವತ್ತು ನೀವು ಒಬ್ಬರೇ ಬಂದಿದ್ದರಲ್ಲ— ನಾನು ಚಹ ಮಾಡ್ತೀನಿ ಅಂದಾಗ ನೀವು ಮೊದಲು ಬೇಕೂಂತ ಹೇಳಿದಿರಿ. ಆ ಮೇಲೆ ಏಕೆ ಬೇಡಾಂದ್ರಿ? ನನಗೆ ಗೊತ್ತು, ನಮ್ಮ ಮನೆಯ ಪರಿಸ್ಥಿತಿ ನಿಮಗೆ ಅರ್ಥವಾಗಿಹೋಗಿದೆಯೆಂದು— ಚಹ ತಯಾರಿಸಲು ಬೇಕಾದ ಪದಾರ್ಥಗಳು ಇರುವುದಿಲ್ಲವೆಂದು ನೀವು ಊಹಿಸಿದಿರಿ— ನಿಜ— ನಿಮ್ಮ ಊಹೆ ಸತ್ಯ. ಅಂದು ನೀವು ನನ್ನನ್ನು ಇಕ್ಕಟ್ಟಿನಿಂದ ಕಾಪಾಡಿದಿರಿ—"

ಕಪ್ಪು ಸಿಮೆಂಟು ನೆಲದ ಮೇಲೆ ಬಿದ್ದ ಕಣ್ಣೀರ ತೊಟ್ಟುಗಳನ್ನು ರಾಜಗೋಪಾಲ ಜ್ಞಾಪಿಸಿಕೊಂಡ.

"ನನ್ನ ಗಂಡನ ಅಂಗವೈಕಲ್ಯ ಹುಟ್ಟಿನಿಂದಲೇ ಬಂದಿದ್ದು, ಅದು ಗೊತ್ತಿದ್ದೇ ನಾನು ಆತನನ್ನು ಆರಿಸಿ ಮದುವೆಯಾದೆ. ಅದಕ್ಕೆ ನಮ್ಮ ಮನೆಯವರ ಒಪ್ಪಿಗೆಯೂ ಇರಲಿಲ್ಲ, ಅಂಗವಿಕಲನೊಬ್ಬನಿಗೆ ನನ್ನ ಬಾಳನ್ನು ಮುಡಿಪಾಗಿಡಲು ತೀರ್ಮಾನಿಸಿ ಇವರನ್ನು ಮದುವೆಯಾದೆ. ನನ್ನ ಪ್ರೀತಿ, ಪ್ರೇಮ ಎಲ್ಲವನ್ನು ಧಾರೆಯೆರೆದೆ. ಆದರೆ— ಈಗ ಈ ಮನುಷ್ಯ ನನ್ನ ಮತ್ತು ನನ್ನ ಮಗನ ಬಾಳನ್ನೇ ಹಾಳುಮಾಡುತ್ತಿದ್ದಾರೆ. ಕೈತುಂಬ ಸಂಬಳ ಬರುವ ಕೆಲಸವಿದ್ದರೂ ಆ ಸಂಪಾದನೆಯನ್ನೆಲ್ಲಾ ತನ್ನ ಕುಡಿತಕ್ಕೇ ಉಪಯೋಗಿಸಿಕೊಳ್ಳುತ್ತಾರೆ. ಅದರ ಮೇಲೆ ಸಾಕಷ್ಟು ಸಾಲಗಳು. ಈ ನಡುವೆ ನನ್ನ ಒಡವೆಗಳನ್ನು ಮಾರಿ ಆಯಿತು. ಪ್ರಾರಂಭದಲ್ಲಿ ನನಗೆ ತುಂಬಾ ಸಂಕಟವೆನಿಸುತ್ತಿತ್ತು, ಜೀವನದಲ್ಲೇ ದೊಡ್ಡ ತಪ್ಪು ಮಾಡಿದೆನೆಂದೆನಿಸುತ್ತಿತ್ತು, ಆದರೆ ಈಗ ಏನೂ ಅನ್ನಿಸುವುದಿಲ್ಲ, ನನ್ನ ಬದುಕೇ ಇಷ್ಟೆಂದುಕೊಂಡಿದ್ದೇನೆ. ಯಾವುದರಲ್ಲೂ ನನಗೆ ಆಸಕ್ತಿ ಉಳಿದಿಲ್ಲ— ಮನೆ ಸ್ವಚ್ಛ ಮಾಡುವುದರಲ್ಲೂ ಕೂಡ— ಹೇಗೋ ದಿನ ದೂಡಬೇಕು— ಅಷ್ಟೇ"

ತಾನು ರೇಣುಕಾಳ ಜೀವನದಲ್ಲಿ ಮತ್ತಷ್ಟು ಆಳಕ್ಕಿಳಿಯುತ್ತಿದ್ದೇನೆಂದು ರಾಜಗೋಪಾಲನಿಗೆ ತೋರಿತು. ಅದು ಆತನಿಗೆ ಬೇಕಿರಲಿಲ್ಲ, ಅವಳ ಜೀವನವನ್ನು ಕೆದಕಿ ಕೊನೆಗೆ ತನ್ನ ಬದುಕನ್ನು ಅಸ್ತವ್ಯಸ್ತವನ್ನಾಗಿ ಮಾಡುವುದು ಅವನಿಗಿಷ್ಟವಿಲ್ಲದ ವಿಚಾರ. ಆದರೆ ತನ್ನ ಅರಿವಿಗೂ ಮೀರಿ ತಾನು ಆ ದಾರಿಯಲ್ಲಿ ಜಾರುತ್ತಿದ್ದೇನೆಯೇ—?

"ರೇಣುಕಾ, ನಾನು ಒಂದು ಮಾತು ಹೇಳಲೆ— ತಪ್ಪಾಗಿ ತಿಳೀಬೇಡಿ—"

"ಹೇಳಿ—"

"ನನ್ನ ಕೈಯಲ್ಲಿ ಸ್ವಲ್ಪ ಹಣ ಇದೆ— ಅದನ್ನು ಬಳಸಿಕೊಳ್ಳಿ".

"ಬೇಡ— ನಾನು ಯಾರಿಂದಲೂ ದುಡ್ಡು ತೆಗೆದುಕೊಳ್ಳುವುದಿಲ್ಲ— ಸಾಲ ಕೂಡ. ಇದು ನನ್ನ ಬದುಕು— ಇದರೊಳಗೆ ಬೇರೆಯವರನ್ನೇಕೆ ಎಳೆಯಲಿ?"

"ಸರಿ— ಸ್ವಲ್ಪ ಊಟ ಮಾಡೋಣ"

"ಬನ್ನಿ ನಾನು ಬಡಿಸುತ್ತೇನೆ"

ಇಬ್ಬರೂ ಎದ್ದು ಊಟ ಮುಗಿಸಿದರು.

"ನನ್ನ ಬದುಕಿನಲ್ಲಿ ಸಂತೋಷ ಸಿಗುವುದು ಇಲ್ಲಿಗೆ ಬಂದಾಗ ಮಾತ್ರ ಕೆಲವೊಮ್ಮೆ ಒಂಟಿಯಾಗಿ ಕುಳಿತಾಗ ನಾನೂ ಆಸಿತಾಳಾಗಿ ಕನಸು ಕಾಣುವುದುಂಟು. ನನ್ನ ಬಾಳಿನ ಆನಂದದ ಮುಹೂರ್ತಗಳು ಅವು. ಒಂದು ದಿನವಾದರೂ ಹಾಗೆ—" ಮಾತುಗಳನ್ನು ಅರ್ಧಕ್ಕೇ ನಿಲ್ಲಿಸಿ ತುಟಿಗಚ್ಚಿದಳು.

"ಹೇಳಿ— ರೇಣುಕಾ— ಬೇಜಾರುಮಾಡಿಕೋಬೇಡಿ"

"ಬೇಜಾರು ಮಾಡಿಕೊಳ್ಳುವ ದಿನಗಳೆಲ್ಲಾ ಕಳೆದಿವೆ. ನಿಜ ಹೇಳಬೇಕೆಂದರೆ ಮೊದಲ ರಾತ್ರಿಯೂ ನನಗೆ ನಿರಾಶೆಯೇ ಆಗಿತ್ತು, ನಾನು ಕಂಡ ಕನಸುಗಳೇ ಬೇರೆ. ಎಲ್ಲಾ ತಿಳಿದು ಮದುವೆ ಮಾಡಿಕೊಂಡಾಗಲೇ ನಾನು ಎಲ್ಲಕ್ಕೂ ಸಿದ್ಧಳಾಗಿದ್ದೆ. ಅಂಗಿ ಹಾಕಿ ಆತನನ್ನು ನೋಡುವಾಗ ಅಂಥ ವೈಕಲ್ಯವೇನೂ ಕಾಣಿಸಿರಲಿಲ್ಲ, ಆದರೆ ಮೊದಲ ರಾತ್ರಿ ಮಂಚದ ಮೇಲೆ ಕುಳಿತು ಅಂಗಿ ಬಿಚ್ಚಿದಾಗಲೇ ವಾಸ್ತವ ತಿಳಿದದ್ದು"

ರೇಣುಕಾ ಸ್ವಲ್ಪ ಹೊತ್ತು ಕಣ್ಣುಮುಚ್ಚಿ ಕುಳಿತಳು.

"ಆದರೂ ನಾನು ತೃಪ್ತಳಂತೆ ನಟಿಸಿದೆ. ಆತನನ್ನು ಪ್ರೀತಿಸುತ್ತಲೇ ಬಂದೆ. ಎಲ್ಲಾ ಸಂದರ್ಭದಲ್ಲೂ ಹೆಗಲು ಕೊಟ್ಟೆ. ಆದರೆ ಆ ಮನುಷ್ಯ ನನಗೆ ನೀಡಿದ್ದು ಬರೀ ನೋವು ಮಾತ್ರ—"

ರೇಣುಕಾ ಗದ್ದಕ್ಕೆ ಎರಡೂ ಕೈಗಳನ್ನು ಕೊಟ್ಟು ಸ್ವಲ್ಪ ಹೊತ್ತು ಸುಮ್ಮನೆ ಕುಳಿತಳು.

ದೂಳು ತುಂಬಿದ ರೇಣುಕಾಳ ಮನೆ ರಾಜಗೋಪಾಲನ ಕಣ್ಣ ಮುಂದೆ ಬಂತು. ಹರಿದು ಮಾಸಿದ ಪರದೆಗಳು, ಮುದಿಯಾದ ಕುರ್ಚಿ ಮೇಜುಗಳು, ಹರಿದ ಹಳೆಯ ನೈಟಿ ತೊಟ್ಟು ಓಡಾಡುವ ರೇಣುಕಾ, ತೂರಾಡುವ ಅಂಗವಿಕಲ ಗಂಡ— ಆತನಿಗೆ ದುಃಖವೆನಿಸಿತು.

"ನೋಡಿ ರೇಣುಕಾ, ನನಗೆ ನಿಮ್ಮ ಕಷ್ಟ ಅರ್ಥವಾಗುತ್ತದೆ. ನಿಮಗೆ ನಾನೇನು ಸಹಾಯ ಮಾಡಬಲ್ಲೆ ಹೇಳಿ—"

ಅವಳು ಕಣ್ಣು ತೆರೆದಳು.

"ನಾನೊಂದು ಕೇಳುತ್ತೇನೆ. ನೀವು ತಪ್ಪು ತಿಳಿಯಬಾರದು. ನಾನು ಕೆಟ್ಟವಳೂಂತಲೂ ಅಂದುಕೋಬಾರದು—"

"ಕೇಳಿ"

"ಬಲಿಷ್ಠವಾದ ತೋಳುಗಳು ಹೇಗಿರುತ್ತವೆಂದು ನನಗೆ ಗೊತ್ತೇ ಇಲ್ಲ, ಆದ್ದರಿಂದ ದಯವಿಟ್ಟು ನಿಮ್ಮ ಈ ಎರಡು ತೋಳುಗಳಿಂದ ನನ್ನನ್ನು ತಬ್ಬಿ ಹಿಡಿಯುವಿರಾ?"

ಅವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆತ ಅವಳ ಪಕ್ಕಕ್ಕೆ ಸರಿದು ಬೆನ್ನು ತಟ್ಟಿ ಸಮಾಧಾನಪಡಿಸುತ್ತ

"ಅಳಬೇಡಿ ರೇಣುಕಾ— ನಾನೇನೂ ತಪ್ಪು ತಿಳಿಯುವುದಿಲ್ಲ, ನಿಮ್ಮ ಬಯಕೆ ಸಹಜವಾದುದೇ—" ಎನ್ನುತ್ತಾ ರಾಜಗೋಪಾಲ ಅವಳನ್ನು ತನ್ನತ್ತ ತಿರುಗಿಸಿ ತೆಕ್ಕೆಯಲ್ಲಿ ಬಳಸಿ ಬಿಗಿದಪ್ಪಿದ. ಒಂದು ನಿಮಿಷವಾಗಿರಬಹುದು. ರಾಜಗೋಪಾಲನಿಗೆ ತಾನೇನೋ ತಪ್ಪು ಮಾಡುತ್ತಿದ್ದೇನೆಂದೆನಿಸಿತು. ಅಂಗವಿಕಲನಾದ, ಅಸಹಾಯಕನಾದ ಒಬ್ಬ ಗಂಡಸಿನ ದಯನೀಯವಾದ ಮುಖ ಆತನ ಮುಂದೆಯೇ ನಿಂತಂತಾಯಿತು. ಬಿಗಿತವನ್ನು ಸಡಿಲಗೊಳಿಸಿ ದೂರ ಸರಿದ.

ರೇಣುಕಾ ಸೋಫಾದಿಂದ ಎದ್ದು,

"ತುಂಬಾ ಥ್ಯಾಂಕ್ಸ್" ಎಂದಳು.

ಹೋಗುವ ಮೊದಲು ಮೀನಿನ ಟ್ಯಾಂಕಿನ ಮುಂದೆ ಸ್ವಲ್ಪ ನಿಂತಳು. ತಿಳಿಯಾದ ನೀರಿನಲ್ಲಿ ಸ್ವಚ್ಛಂದವಾಗಿ ಈಜಾಡುವ ತೃಪ್ತ ಮೀನುಗಳನ್ನು ಹಸಿರುಗಿಡಗಳನ್ನು ಕ್ಷಣಕಾಲ ದಿಟ್ಟಿಸಿದಳು.

"ನಾನು ನನ್ನ ಮಗನನ್ನು ಒಂದು ದಿನ ಕರೆದುಕೊಂಡು ಬರುತ್ತೇನೆ. ಟ್ಯಾಂಕ್ ಹೇಗೆ ಶುದ್ಧಗೊಳಿಸಿ ಕಾಪಾಡಬೇಕೆಂದು ನೀವೇ ಅವನಿಗೆ ಹೇಳಿಕೊಡಬೇಕು" ಎನ್ನುತ್ತಾ ರೇಣುಕಾ ಮನೆಯಿಂದ ಹೊರಬಿದ್ದಳು.

●

**ಪ್ರಶ್ನೆ**

ಇನ್ನಷ್ಟು ಅಳುವನ್ನೇ
ಕಲಿಸಿದೆಯೇಕೆ ಹುಡುಗಾ
ನಗುವುದನ್ನ.

—ವನರಾಗಶರ್ಮ

**ಲಹರಿ**

ನಿನ್ನ ಕಣ್ಣ ಮಡುವಿನಲ್ಲಿ
ಮಿನುಗುತ್ತದೆ ಬಾನ
ಇಳಿದಷ್ಟೂ ಆಳ
ಮಾತಾಡುತ್ತದೆ ಮೌನ

—ವಸಂತಕುಮಾರ ಪೆರ್ಲ


BACK TO MAIN PAGE....